ಸಾವಿರ ಕೆರೆ ಮಾತ್ರ ಉಳಿದಿದೆ ಇನ್ನು 23 ಸಾವಿರ ಕೆರೆಯಲ್ಲಿ ಯಾವುದಕ್ಕೆ ತೂಬಿಲ್ಲ, ಹೂಳೆತ್ತುವ ಕಾರ್ಯಕ್ರಮ ಇಲ್ಲ, ಒಂದು ವರ್ಷದಿಂದಲೂ ಯಾವುದೇ ಕಾರ್ಯಕ್ರಮ ಮಾಡಿಲ್ಲ, ಹೋದವರ್ಷವೂ ಇದೇ ಪ್ರಶ್ನೆ ಬಂತು, ಕನಿಷ್ಪ ಟ್ರಾಕ್ಟರ್ ಕೊಟ್ಟು ರೈತರನ್ನು ಇನ್‌ವಾಲ್ವ್ ಮಾಡುವಂತಹ ಒಂದು ಕಾರ್ಯಕ್ರಮ ರೂಪಿಸುವುದೂ ಆಗಲಿಲ್ಲ. ಜೊತೆಗೆ ಕೇಂದ್ರ ಸರ್ಕಾರದಿಂದ ಬಯಲುಸೀಮೆ ಅಭಿವೃದ್ಧಿಗೆಂದು ಜಾಸ್ತಿ ಚೆಕ್ ಡ್ಯಾಂಗಳನ್ನು ಹಾಕಿ ನೀರನ್ನು ಭೂಮಿಯಲ್ಲಿ ಶೇಖರಿಸುವಂತಹ ವ್ಯವಸ್ಥೆ ಇದೆ. ಹೆಚ್ಚು ಹಣ ಕೊಡುತ್ತಾರೆ, ಆ ಹಣ ಉಪಯೋಗಿಸಿ ನೀರು ಇಂಗಿಸಿ ಭೂಮಿಯಲ್ಲಿ ನೀರು ಉಳಿಸುವಂತಹ ಕೆಲಸವನ್ನು ತ್ವರಿತವಾಗಿ ತಾವು ಈಗ ಮಾಡಿದರೆ ಸಮಸ್ಯೆ ಪರಿಹರಿಸಬಹುದು.

ಶ್ರೀ ತಿಪ್ಪೆಸ್ವಾಮಿ:- ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ ಅಷ್ಟೆ ಪ್ರಾಮುಖ್ಯತೆ ಹೊಂದಿದೆ ಇದಕ್ಕೆ ನಾನು ಹೆಚ್ಚಿನ ಆದ್ಯತೆ ಕೊಡುತ್ತೇನೆ.

ಶ್ರೀ ಎಸ್.ಅಂಗಾರ:- ಸುಳ್ಯ ತಾಲ್ಲೂಕಿನಲ್ಲೂ ಕಪ್ಪು ಪ್ರದೇಶವೆಂದು ಘೋಷಣೆ ಮಾಡಿ ಸಣ್ಣ ನೀರಾವರಿ ಮತ್ತು ಕೊಳವೆ ಬಾವಿಗಳ ಬಗ್ಗೆ ಕೂಡ ಯಾವುದೇ ಕಾರ್ಯಕ್ರಮವಿಲ್ಲ. ಇದರಿಂದಾಗಿ ಅಲ್ಲಿ ಸಾಕಷ್ಟು ಗೊಂದಲವಾತಾವರಣವುಂಟಾಗಿದೆ. ನಬಾರ್ಡ್‌ನಿಂದ ಸಿಗುವ ಸಬ್ಸಿಡಿ ಕೂಡ ಪಿಎಲ್‌ಡಿ ಅಥವಾ ಬೇರೆ ಬ್ಯಾಂಕ್‌ಗಳಿಂದಿರಬಹುದು, ಸುಳ್ಯ ಮಲೆನಾಡು ಪ್ರದೇಶ ಹೆಚ್ಚು ಮಳೆ ಬೀಳುವ ಪ್ರದೇಶ ಇರುವುದರಿಂದ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟು ಕಪ್ಪು ಪ್ರದೇಶವೆಂದು ಘೋಷಣೆ ಮಾಡಿರುವುದರಿಂದ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ.

ಶ್ರೀ ತಿಪ್ಪೇಸ್ವಾಮಿ:- ಅಧ್ಯಕ್ಷರೇ ಭೂಗರ್ಭದಲ್ಲಿ ಇಂತಿಷ್ಟು ಪ್ರಮಾಣ ನೀರಿದ್ದರೆ ರೈತರಿಗೆ ಬೋರ್ ಹಾಕಿಸಿಕೊಳ್ಳಲು ಅನುಮತಿ ಕೊಡಿಸಲು ನಾನು ವ್ಯವಸ್ಥೆ ಮಾಡುತ್ತೇನೆ. ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆಂದು ಹೇಳಿರುವ ಬಗ್ಗೆ ನಾನು ಮತ್ತೆ ಅಧಿಕಾರಿಗಳನ್ನು ಕಳುಹಿಸಿ ತಪಾಸಣೆ ಮಾಡಿ ಅಲ್ಲಿ ಅವಕಾಶವಿದ್ದರೆ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ವಿಷಯ:- ದಕ್ಷಣ ಕನ್ನಡ ಜಿಲ್ಲೆಯಲ್ಲಿ ಹೊಸ ಪೊಲೀಸ್ ಠಾಣೆಯ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 182 (1400)

ಶ್ರೀ ಕೆ.ಪ್ರತಾಸ್‌ಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಿ ಹೊಸ ಪೋಲೀಸ್ ಠಾಣೆಯನ್ನು ತೆರೆಯುವ ಯೋಜನೆ ಸರಕಾರದವರ ಮುಂದಿದೆಯೇ?

ಆ) ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಇರುವ ಕುಂದಾಪುರ ತಾಲ್ಲೂಕು ಹೊಸಂಗಡಿಯಲ್ಲಿ ಪೋಲೀಸ್ ಠಾಣೆ ತೆರೆಯುವ ಯೋಜನೆ ಸರ್ಕಾರದವರ

ಮುಂದಿದೆಯೇ?

ಶ್ರೀ ಆರ್.ರೋಪನ್ ಬೇಗ್ (ಗೃಹ ರಾಜ್ಯ ಸಚಿವರು):-

ಅ) 1) ಪುಂಜಾಲಕಟ್ಟೆ ಹೊರ ಠಾಣೆಯನ್ನು ಪೋಲೀಸ್ ಠಾಣೆಯಾಗಿ ಪರಿವರ್ತಿಸುವುದು?

2) ಬಂಟ್ವಾಳದಲ್ಲಿ ಗ್ರಾಮಾಂತರ ಪೋಲೀಸ್ ಠಾಣೆ ಸ್ಥಾಪಿಸುವುದು.

3) ಬಂಟ್ವಾಳದಲ್ಲಿ ಸಂಚಾರ ಠಾಣೆ ಸ್ಥಾಪಿಸುವುದು.

ಇವುಗಳನ್ನು ಮುಂಬರುವ ವರ್ಷಗಳಲ್ಲಿ ಪರಿಗಣಿಸುವ ಸಾಧ್ಯತೆ ಇದೆ

ಆ) ಇಲ್ಲ.

ಶಂಕರನಾರಾಯಣ ಪೋಲೀಸ್ ಠಾಣೆಯನ್ನು ಸ್ಥಾಪಿಸಿರುವುದರಿಂದ ಈಗ ಹೊಸಂಗಡಿಯಲ್ಲಿ ಪೋಲೀಸ್ ಠಾಣೆ ಸ್ಥಾಪಿಸುವ ಅವಶ್ಯಕತೆ ಇಲ್ಲ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಅಧ್ಯಕ್ಷರೇ, ಉತ್ತರದಲ್ಲಿ ಕರ್ನಾಟಕ ವಿದ್ಯುತ್ ನಿಗಮವಿರುವ ಹೊಸಂಗಡಿಯಲ್ಲಿ ಪೋಲಿಸ್ ಠಾಣೆ ತೆರೆಯುವ ಉದ್ದೇಶವಿದೆ ಎಂದಿದ್ದಾರೆ. ಯೋಜನಾ ಪ್ರದೇಶಗಳಲ್ಲಿ ಪೋಲಿಸ್ ಠಾಣೆ ತಾವು ತೆರೆಯುತ್ತೀರಿ. ಅದಕ್ಕೆ ಪೂರಕವಾದ ಕಟ್ಟಡ ಇತರ ಸೌಲಭ್ಯಗಳನ್ನು ಯೋಜನೆ ಸಂದರ್ಭದಲ್ಲಿ ಮಾಡಿಕೊಂಡಿರುತ್ತಾರೆ. ಅದರೆ ತಾವು ಏಕೆ ತೆರೆಯುವುದಿಲ್ಲವೆಂಬುದಕ್ಕೆ ಸಮರ್ಪಕ ಉತ್ತರವಿಲ್ಲ. ಶಂಕರನಾರಾಯಣದಲ್ಲಿ ಪೋಲಿಸ್ ಠಾಣೆ ಇದೆ ಮಂಗಳೂರಿನಲ್ಲಿ ಠಾಣೆಯಿದೆ ಅಥವಾ ಕುಂದಾಪುರದಲ್ಲಿದೆ ಎಂಬ ಉದ್ದೇಶದಿಂದ ಯೋಜನಾ ಪ್ರದೇಶದಲ್ಲಿ ಮಾಡಬೇಕಾದ ಕೆಲಸವನ್ನು ತಡೆಹಿಡಿಯುವುದು ಸರಿಯಲ್ಲ ಮತ್ತು ಏಕೆ ಕಟ್ಟಡ ಮಾಡಿಕೊಂಡಿದ್ದೀರಿ? ಈ ಎರಡೂ ಮುಖ್ಯಮಂತ್ರಿಗಳ ಇಲಾಖೆಗೆ ಬರುತ್ತವೆ. ಕಟ್ಟಡವಿದ್ದರೂ ಪೋಲಿಸ್ ಠಾಣೆ ಏಕೆ ತೆರೆಯುವುದಿಲ್ಲವೆಂದೂ ಸಹ ಚಿಂತನೆ ಮಾಡಬೇಕಾಗುತ್ತದೆ. ಕೇಸ್ ಇದೆ ಎಂದು ಹೇಳಿ ಇಲ್ಲವೆನ್ನಲಾಗದು. ಯೋಜನಾ ಪ್ರದೇಶದಲ್ಲಿ ಸರ್ಕಾರದ ನೀತಿಗನುಗುಣವಾಗಿ ತಾವು ಪೋಲೀಸ್ ಠಾಣೆಯನ್ನು ತೆರೆಯುತ್ತೀರೋ ಇಲ್ಲವೋ?

ಶ್ರೀ ಆರ್.ರೋಶನ್ ಬೇಗ್:- ಅಧ್ಯಕ್ಷರೇ, ಮಾನ್ಯ ಸದಸ್ಯರು ಹೊಸಂಗಡಿಯಲ್ಲಿ ಪೋಲಿಸ್ ಠಾಣೆ ಆಗಬೇಕೆಂದು ಹೇಳುತ್ತಾರೆ, ನಮ್ಮ ವರದಿ ಪ್ರಕಾರ ಒಂದು ಪೋಲಿಸ್ ಠಾಣೆಗೆ ಜನಸಂಖ್ಯೆ 60 ಸಾವಿರ ಇರಬೇಕು, ಆದರೆ ಹೊಸಂಗಡಿ ವ್ಯಾಪ್ತಿಯಲ್ಲಿ 10 ಹಳ್ಳಿಗಳು ಬರುತ್ತವೆ. ಅವುಗಳ ಜನಸಂಖ್ಯೆ 26,200 ಮಾತ್ರ ಆಮೇಲೆ ಇಲ್ಲಿ ಕ್ರೈಂ ರೇಟೇನಾದರೂ ಜಾಸ್ತಿ ಇದೆಯೋ ಎಂದು ನೋಡಿದರೆ 1993ರಲ್ಲಿ (23), 94ರಲ್ಲಿ (36), 95ರಲ್ಲಿ (43), 96ರಲ್ಲಿ (42) ಮಾತ್ರವಿದೆ. The population of Shankaranarayana Police Station is only 52,566 including

the 10 villages of Hosangadi. Crime rate in Shankaranarayana Police Satation during 1993, it was 48. That is why we have taken a decision that there is no necessity of a Police Station at Hosangadi. ಅಂತ ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ನನ್ನ ಪ್ರಶ್ನೆಯನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕು.

SRI H.SHIVAPPA:- Sir, I have got one supplementary question..

MR.SPEAKER:- There is nothing common in the question. It is question related to a particular constituency.

SRI H.SHIVAPPA:- I also want to ask a common question related to the entire State.

MR.SPEAKER:- You kindly read the question. The question, tabled by the hon.Member Sri Pratapchandra Setty is pertaining to his constituency. Only the Chair is aware as to which question is of common nature and which is of constituency oriented. I cannot pocket all your insinuations levelled against the Chair so easily.

SRI H.SHIVAPPA:- If I am permitted I will convince you.

MR.SPEAKER:- Please understand me.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಹೊಸಗಂಡಿಯಲ್ಲಿ ಕ್ರೈಂ ಜಾಸ್ತಿ ಇದೆ ಅಥವಾ ಜನಸಂಖ್ಯೆ ಜಾಸ್ತಿ ಇದೆ ಎಂದು ನಾನು ಹೇಳಿಲ್ಲ, ಈ ರಾಜ್ಯದ ಬೇರೆ ಬೇರೆ ಇಲಾಖೆಗಳ ನೌಕರರು ಆ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ಯೋಜನಾಪ್ರದೇಶದಲ್ಲಿ ಪೋಲಿಸ್ ಠಾಣೆಯಿರಬೇಕೆಂಬ ನೀತಿಗನುಗುಣವಾಗಿ ಸರ್ಕಾರ ಅದಕ್ಕೆ ಬೇಕಾದ ಕಟ್ಟಡ ಮಾಡಿದ ಮೇಲೂ ತಾವು ಬೇರೆ ಕಡೆ ಮಾಡುವ ಔಚಿತ್ಯವೇನು? ಆಲೋಚನೆ ಮಾಡಿ. ಏಕೆ ಕಟ್ಟಡ ಮತ್ತಿತರ ಪೂರಕ ಸೌಲಭ್ಯ ಕೊಟ್ಟಿದ್ದೀರಿ? ಏಕೆ ಆಸ್ಪತ್ರೆ ತೆಗೆದಿದ್ದೀರಿ? ಪೇಶಂಟ್ಸ್ ಜಾಸ್ತಿ ಬರುವುದಿಲ್ಲವೆಂದು ಆಸ್ಪತ್ರೆ ತೆಗೆಯದಿರುತ್ತೀರಿ? ಅಲ್ಲಿ ಪೋಲಿಸ್ ಠಾಣೆಗೆ ಬೇಕಾದ ಕಟ್ಟಡ ಕಟ್ಟಿದ್ದೀರಿ, ಆದರೆ ಠಾಣೆ

ತೆರೆದಿಲ್ಲ? ರಾಜ್ಯದ ಬಹುತೇಕ ಜಿಲ್ಲೆಗಳ ಜನರು ಅಲ್ಲಿ ವಾಸಿಸುತ್ತಿದ್ದಾರೆ. ಆದ್ದರಿಂದ ಠಾಣೆ ಮಂಜೂರು ಮಾಡುತ್ತಿರೋ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್.ರೋಶನ್ ಬೇಗ್:- ಅಧ್ಯಕ್ಷರೇ, ನಾನು ಒಂದು ಭರವಸೆ ಕೊಡುತ್ತೇನೆ, ಅವರ ಜಿಲ್ಲೆಗೆ ನಾನು ಟೂರ್ ಹೋದಾಗ ಅವರನ್ನು ಕರೆದುಕೊಂಡುಹೋಗಿ ಪೋಲಿಸ್ ಠಾಣೆಗಾಗಿ ಕಟ್ಟಡ ಕಟ್ಟಿದ್ದಾರೆಂದು ಅವರು ಹೇಳಿದ್ದಾರೆ ಅದನ್ನು ಖುದ್ದು ನೋಡುತ್ತೇನೆ. ಅಮೇಲೆ ಕರ್ನಾಟಕದಲ್ಲಿ ಪೊಲೀಸ್ ಠಾಣೆಗಳಿರುವುದು 769, About 10-15 years back, the requirement of police Stations as per National Police Commission's recommendation was 1128. ಅಷ್ಟು ಸ್ಟೇಶನ್ಸ್ ಕರ್ನಾಟಕದಲ್ಲಿರಬೇಕು ಅಂತ ಇದೆ, 1990-91ರಲ್ಲಿ ಕರ್ನಾಟಕ ಜನಸಂಖ್ಯೆ 4.48 ಕೋಟಿ ಇದ್ದಾಗ 1275 ಠಾಣೆಗಳಿರಬೇಕಾಗಿತ್ತು, We have only about 768 police stations. We are working out as to how we could have more police stations.

ವಿಷಯ:- ಬೆಂಗಳೂರು ನಗರದಲ್ಲಿ ಒಳಚರಂಡಿ ಕೊಳವೆ ಪೈಪುಗಳನ್ನು ಬದಲಾಯಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 183 (1202)

ಶ್ರೀ ಪಿ.ಎನ್.ಪ್ರಕಾಶ್:- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಹಳೆಯ ನಗರದ ಒಳಚರಂಡಿ ಕೊಳವೆ ಪೈಪುಗಳು ಚಿಕ್ಕಪೈಪುಗಳಾಗಿದ್ದು ಅವುಗಳನ್ನು ಬದಲಾಯಿಸಿ ದೊಡ್ಡ ಪೈಪುಗಳನ್ನು ಹಾಕಲು ಸರ್ಕಾರದವರು ಪರಿಶೀಲಿಸಿರುವರೆ?

ಆ) ಹಾಗಿದ್ದಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):-

ಅ) ಇಲ್ಲ.

ಆ) ಸಾರ್ವಜನಿಕರಿಂದ ಕೊಳಚೆ ನೀರು ಉಕ್ಕಿ ಹರಿಯುವ ಬಗ್ಗೆ ಮತ್ತು ಕೊಳವೆಗಳು ಕಟ್ಟಿ ಕೊಂಡಿರುವ ಬಗ್ಗೆ ದೂರು ಬಂದಲ್ಲಿ ಮಂಡಳಿಯು ಅಂತ ಜಾಗದಲ್ಲಿರುವ ಚಿಕ್ಕ ಕೊಳವೆಗಳನ್ನು ಹೆಚ್ಚುವರಿ ವ್ಯಾಸದ ಕೊಳವೆಗಳಿಂದ ಯೋಜಿತ ಕಾರ್ಯಕ್ರಮದಡಿಯಲ್ಲಿ ಬದಲಾಯಿಸಲಾಗುತ್ತದೆ.

ಶ್ರೀ ಪಿ.ಎನ್.ಪ್ರಕಾಶ್:- ಅಧ್ಯಕ್ಷರೇ ಬೆಂಗಳೂರಿನಲ್ಲಿ ಕಳೆದು 50-60 ವರ್ಷಗಳಿಂದ ಒಳಚರಂಡಿಪೈಪ್‌ಗಳು ಬದಲಾವಣೆ ಮಾಡಬೇಕೆಂದು ಪ್ರಶ್ನೆ ಕೇಳಿದ್ದೆ, ಅವರು ದೂರು